ದಿನಾಂಕಃ 11.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಎಂ ಎಸ್ ವಕೀಲರಿಂದಃ

ವೆಂಕಟರಮಣಯ್ಯ ಮತ್ತು ಗೋಪಾಲಕೃಷ್ಣಯ್ಯ ರವರಿಗೆ ಆದ ವಿಭಾಗ ಪತ್ರದಂತೆ ಇಬ್ಬರಿಗೂ ಸಮಾನವಾಗಿ ವಿಸ್ತೀರ್ಣ ಖಾತೆಯಾಗಿದೆ ಎಂದರೆ ಸರಿಯಲ್ಲ. ವೆಂಕಟರಮಣಯ್ಯನವರ ಹೆಸರಿನಲ್ಲಿ 17 x 36, 11 ½ x 75 ವಿಸ್ತೀರ್ಣವನ್ನು ಹೊರತು ಪಡಿಸಿ ಇನ್ನು ಹೆಚ್ಚಿನ ವಿಸ್ತೀರ್ಣ ಅವರಿಗೆ ಸೇರಿತ್ತು ಎಂಬ ಬಗ್ಗೆ ಖಾತಾ ದಾಖಲೆಯನ್ನಾಗಲೀ ಅಥವಾ ನೋಂದಾಯಿತ ದಾಖಲಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ನಿಡಿ 2 ಮತ್ತು 3 ರಲ್ಲಿ ನಮೂದಾಗಿರುವ ವಿಸ್ತೀರ್ಣಕ್ಕಿಂತ ಹೆಚ್ಚಿಗೆ ವಿಸ್ತೀರ್ಣಕ್ಕೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ ಹೆಚ್ಚುವರಿ ವಿಸ್ತೀರ್ಣ ಇಲ್ಲ ಎಂದು ನುಡಿಯುತ್ತಾರೆ. ನಿಡಿ 4 ಮತ್ತು 7 ರಲ್ಲಿ ನಿವೇಶನ 36 x 17 ಎಂದು ಕ್ರಯಪತ್ರಕ್ಕಿಂತ ಹೆಚ್ಚಿಗೆ ವಿಸ್ತೀರ್ಣ ತೋರಿಸಿದ್ದೇವೆ ಎಂದರೆ ಸರಿಯಲ್ಲ. ಅದೇ ರೀತಿ ನಿಡಿ 4 ಮತ್ತು 7 ರಲ್ಲಿ ಹಿತ್ತಲು 14 x 75 ಎಂದು ತೋರಿಸಿದ್ದು ಆದರೆ ವಾಸ್ತವವಾಗಿ 11 ½ x 75 ಅಡಿ ವಿಸ್ತೀರ್ಣ ಮಾತ್ರ ಖಾತೆ ಆಗಬೇಕಾಗಿತ್ತು ಎಂದರೆ ಸರಿಯಲ್ಲ. ನಿಡಿ 6 ಮತ್ತು 9 ರಲ್ಲಿ ತೋರಿಸಿರುವ 6x18 ವಿಸ್ತೀರ್ಣದ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಡಿ 2 ಮತ್ತು 3 ರಲ್ಲಿ ಮೇಲ್ಕಂಡ 6x18 ವಿಸ್ತೀರ್ಣ ಕ್ರಯಪತ್ರದಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ. ನಾನು 6x18 ಅಡಿ ವಿಸ್ತೀರ್ಣದ ಜಾಗವನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಡಿ 4 ಮತ್ತು 7 ರಲ್ಲಿ ತೋರಿಸಿರುವ ನಿವೇಶನ 36 x 17 ವಿಸ್ತೀರ್ಣದ ಜಾಗವನ್ನು ನಾನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ.

ಈಗ ನನಗೆ ತೋರಿಸಿದ ಪೋಟೋದಲ್ಲಿ ಕಾಣುವ ಮನೆಯ ಕಿಟಕಿ ಸಜ್ಜಾಗಳು , ಮನೆಯ ಪೈಪ್ ಲೈನ್ ಮತ್ತು ಮನೆಗೆ ಹೊಂದಿಕೊಂಡಂತೆ ಪಶ್ಚಿಮ ಭಾಗದಲ್ಲಿರುವ ಸಿಮೆಂಟ್ ನೆಲ ಈ ಜಾಗಗಳು ವಾದಿಯ ಮಾಲೀಕತ್ವಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ಪೋಟೋದಲ್ಲಿ ಕಾಣುವ ಕಟ್ಟಡ ವಾದಿಯ ಮನೆ ಎಂದರೆ ಸರಿ . ಸಾಕ್ಷಿ ಮುಂದುವರೆದು ನನ್ನ ಒಂದು ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಪೋಟೋವನ್ನು ನಿಪಿ 27 ಎಂದು ಗುರುತಿಸಲಾಯಿತು. ನಾನು ಹೇಳಿದಂತೆ ಒಂದು ಅಡಿ 10 ಇಂಚು (ದಾವಾ ಡಿ ಷೆಡ್ಯೂಲ್) ಜಾಗದ ಮೇಲೆ ನನಗೆ ಯಾವುದೇ ಮಾಲೀಕತ್ವ ಹಕ್ಕು, ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸಿ ಮತ್ತು ಡಿ ಷೆಡ್ಯೂಲ್ ಆಸ್ತಿಯ ಉಪಯೋಗಕ್ಕೆ ನಾನು ವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸಾಕ್ಷಿ ಆ ಜಾಗ ನನಗೆ ಸೇರಿದ್ದು ಆದರೆ

ವಾದಿ ಸುಣ್ಣ ಬಣ್ಣ ಬಳೆದು ಕೊಳ್ಳಲು ನಾನುತೊಂದರೆ ನೀಡವುದಿಲ್ಲ ಎಂದು ನುಡಿಯುತ್ತಾರೆ. ಗೋಪಾಲಕೃಷ್ಣಯ್ಯ ಮತ್ತು ವೆಂಕಟರಮಣಯ್ಯರವರಿಗೆ ಮೂಲತಃ 12 ಅಂಕಣದ ಹೆಂಚಿನ ಮನೆ ಇತ್ತು ಎಂದರೆ ಸಾಕ್ಷಿ ದಾಖಲೆಗಳು ಇವೆ ಎಂದು ನುಡಿಯುತ್ತಾರೆ. ಆ ಮನೆಯ ದಕ್ಷಿಣ ಭಾಗದಲ್ಲಿ ಒಟ್ಟಾಗಿ ಪೂರ್ವ ಪಶ್ಚಿಮ 23 ಅಡಿ ದಕ್ಷಿಣೋತ್ತರ 75 ಅಡಿ ವಿಸ್ತೀರ್ಣ ಇತ್ತು ಎಂದರೆ ಸುಳ್ಳು. ಸದರಿ 23 x 75 ಅಡಿ ವಿಸ್ತೀರ್ಣದ ಜಾಗಕ್ಕಿಂತೆ ಹೆಚ್ಚುವರಿ ವಿಸ್ತೀರ್ಣವನ್ನು ನಾನು ಖರೀದಿ ಮಾಡಿಲ್ಲ ಎಂದರೆ ಸುಳ್ಳು. ದಾವಾ ಸ್ವತ್ತುಗಳಿಗೆ ವಾದಿಯೇ ಸಂಪೂರ್ಣ ಮಾಲೀಕರು ಎಂದರೆ ಸುಳ್ಳು. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಬಿ ಷೆಡ್ಯೂಲ್ ದಕ್ಷಿಣ ಭಾಗದಲ್ಲಿರುವ ನಿವೇಶನದ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿ 1 ½ ಅಡಿ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಯ ಜಾಗವನ್ನು ದಕ್ಕಿಸಿಕೊಳ್ಳಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಸುಳ್ಳು ದಾಖಲೆಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.